## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್-65ರಲ್ಲಿ ದಿನಾಂಕ: 21-05-2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

ಸಮಯ ಬೆಳಿಗ್ಗೆ 11:00 ಘಂಟೆಗೆ

ವಾರ್ಡ್ ಸಂಖ್ಯೆ-65 ಕಾಡುಮಲ್ಲೇಶ್ವರ

ದಿನಾಂಕ: 21-05-2022 ರಂದು ವಾರ್ಡ್ ಸಂಖ್ಯೆ:65ರ ಮೇ ಮಾಹೆಯ ವಾರ್ಡ್ ಸಮಿತಿ ಸಭೆಯು ಬೆಂಗಳೂರು ಸೇವಾ ಕೇಂದ್ರದ ಮಿಟಿಂಗ್ ಹಾಲ್, ಎಂ.ಕೆ.ಕೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

| ಕ್ರ.ಸಂ | ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಜಿ ಇಂದ್ರಕುಮಾರ್ | ನೋಡಲ್ ಅಧಿಕಾರಿ ವಾರ್ಡ್-65 ಕಾರ್ಯಪಾಲಕ ಅಭಿಯಂತರರು (ಯಲಹಂಕ) |
| 2 | ಶ್ರೀ ನರಸಿಂಹಯ್ಯ | ಸಹಾಯಕ ಅಭಿಯಂತರರು ವಾರ್ಡ್-65 |
| 3 | ಡಾ. ಭಾಗ್ಯಲಕ್ಷ್ಮೀ | ಆರೋಗ್ಯ ಅಧಿಕಾರಿ |
| 4 | ರಾಮಚಂದ್ರ | ಸಹ ಕಂದಾಯ ಅಧಿಕಾರಿ ಕಛೇರಿ |
| 5 | ಎ.ಎಸ್ ಭೋಗೇಶ್ | ASI (ಕಾನೂನು ಮತ್ತು ಸುವ್ಯವಸ್ಥೆ) |
| 6 | ಧನಂಜಯ್ | ASI (ಸಂಚಾರಿ) |
| 7 | ಜಯಲಕ್ಷ್ಮೀ | SI (ಸಂಚಾರಿ) |
| 8 | ಶ್ರೀಧರ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು Major Roads west |
| 9 | ಮಂಜುನಾಥ್ | ಸಹಾಯಕ ಅಭಿಯಂತರರು BESCOM ಇಲಾಖೆ |
| 10 | ಆರ್ ವೆಂಕಟೇಶ್ | ಬೀದಿದೀಪ ನಿರ್ವಹಣೆ |
| 11 | ಓಬಳೇಶ್ | ಆರೋಗ್ಯ ಇಲಾಖೆ (ಘನತ್ಯಾಜ್ಯ) |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಧರ್ಮರಾಜ್.ಜಿ ನಾಯ್ಕ್, ಸಹಾಯಕ ಇಂಜಿನಿಯರ್ (ವೈಟ್ ಟಾಪಿಂಗ್) ರಸ್ತೆ ಮೂಲಭೂತ ಸೌಕರ್ಯ ರವರು ಸಭೆಯಲ್ಲಿ ಗೈರುಹಾಜರಿದ್ದು, ಮುಂದಿನ ಸಭೆಗೆ ಹಾಜರಾಗಲು ನೋಡಲ್ ಅಧಿಕಾರಿರವರು ಸೂಚಿಸಿದರು.

- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು Major Roads west ಶ್ರೀ ಶ್ರೀಧರ್ ರವರು ಸಭೆಯಲ್ಲಿ ಹಾಜರಿದ್ದು, 8ನೇ ಮುಖ್ಯರಸ್ತೆಯಲ್ಲಿ ಬೀದಿದೀಪಗಳಿಗಾಗಿ ರಸ್ತೆ ಅಗೆಯುವುದು ಪೂರ್ತಿಯಾದ ನಂತರ ಡಾಂಬರೀಕರಣ ಮುಗಿಸುವುದಾಗಿ ಸಭೆಗೆ ತಿಳಿಸಿದರು.

Scanned with CamScanner

- ಆರೋಗ್ಯ ಇಲಾಖೆಯ ಶ್ರೀ ಅನಿಲ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ರಜೆ ಇರುವುದರಿಂದ ಇವರ ಪರವಾಗಿ ಶ್ರೀ ಓಬಳೇಶ್ ರವರು ಹಾಜರಿದ್ದು ಕಸ ವಿಲೇವಾರಿ ಹಾಗೂ ಪಾದಚಾರಿ ಮಾರ್ಗದಲ್ಲಿ ತಿಂಡಿ ತಿನಿಸುಗಳನ್ನು ಮಾರಾಟ ಮಾಡುವವರು ಕಡ್ಡಾಯವಾಗಿ ತ್ಯಾಜ್ಯ ಸಂಗ್ರಹಣೆ ಮಾಡಿ ಕಸದ ವಾಹನಕ್ಕೆ ಹಾಕಲು ಸೂಚಿಸಿದರು.

- ಸಭೆಯಲ್ಲಿ ಹಾಜರಿದ್ದು, ಕಸ ವಿಲೇವಾರಿಯನ್ನು Dry waste ಮತ್ತು Wet waste ವಿಂಗಡನೆ ಮಾಡಲು ಸರಿಯಾಗಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ತಿಳಿಸಲಾಯಿತು.

- ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ಡಾ// ಲಾವಣ್ಯ ರವರು ಪರವಾಗಿ ಭಾಗ್ಯ ರವರು ಸಭೆಯಲ್ಲಿ ಹಾಜರಿದ್ದು, ಕೋವಿಡ್-19 ವ್ಯಾಕ್ಸಿನೇಶನ್ ಬಗ್ಗೆ ಸಾರ್ವಜನಿಕರು ಮಾತನಾಡಿ ಬೂಸ್ಟರ್ ಡೋಸ್‌ನ್ನು 60 ವರ್ಷ ಮೇಲ್ಪಟ್ಟವರಿಗೆ ಹಾಕಲು ಮನವಿ ಮಾಡಿದರು.

- ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಇಂಜಿನಿಯರ್ ಸುಹನಬಾನು ರವರು ಸಭೆಗೆ ಗೈರುಹಾಜರಾಗಿದ್ದು, ವಾರ್ಡ್‌ನ ಸಮಸ್ಯೆಗಳ ಬಗ್ಗೆ ದೂರವಾಣಿ ಮೂಲಕ ವಾರ್ಡ್-65ರ ಸಹಾಯಕ ಅಭಿಯಂತರರು ತಿಳಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

- ಅರಣ್ಯ ಇಲಾಖೆ ಅಧಿಕಾರಿಯವರು ಸಭೆಗೆ ಹಾಜರಾಗಿದ್ದು, ಈಸ್ಟ್ ಪಾರ್ಕ್ ರಸ್ತೆಯಲ್ಲಿ ಮರಗಳು ಕೊಂಬೆಗಳು ಬೀದಿದೀಪಗಳಿಗೆ ಅಡ್ಡ ಇರುವುದರಿಂದ ರೆಂಬೆಕೊಂಬೆಗಳನ್ನು ಕತ್ತರಿಸಲು ಶ್ರೀ ಕೃಷ್ಣ ರವರು ಸಭೆಗೆ ತಿಳಿಸಿರುತ್ತಾರೆ. ಇದಕ್ಕೆ ಅರಣ್ಯ ಇಲಾಖೆಯವರು ಶ್ರೀ ನರಸಿಂಹಮೂರ್ತಿ ರವರು ರೆಂಬೆಕೊಂಬೆಗಳನ್ನು ತೆಗೆಯುವುದಾಗಿ ತಿಳಿಸಿರುತ್ತಾರೆ.

- ಬೀದಿ ದೀಪ ನಿರ್ವಹಣೆಯ ಶ್ರೀ ವೆಂಕಟೇಶ್ ರವರು ಹಾಜರಿದ್ದು, 7ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ಅಭಿಜಿತ್ ಅಪಾರ್ಟ್‌ಮೆಂಟ್, ಈಸ್ಟ್ ಪಾರ್ಕ್ ರಸ್ತೆ ಪೋಸ್ಟ್ ಆಫೀಸ್, 15ನೇ ಅಡ್ಡರಸ್ತೆ ವರುಣ್ ಮೋಟಾರ್ ಪಕ್ಕ, 8ನೇ ಮುಖ್ಯರಸ್ತೆಗಳ ಬೀದಿದೀಪಗಳು ದುರಸ್ಥಿಯಾಗಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ. ಇದಕ್ಕೆ ಶ್ರೀ ವೆಂಕಟೇಶ್ ರವರು ಸರಿಪಡಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ. ಹಾಗೂ ಶ್ರೀ ರಾಮಸ್ವಾಮಿ ಮತ್ತು ಶ್ರೀಮತಿ ರೇಖಾಚಾರಿ ರವರು 8ನೇ ಮುಖ್ಯರಸ್ತೆಯಲ್ಲಿ ಸ್ವಿಚ್ ಬೋರ್ಡ್‌ಗಳನ್ನು ಅಳವಡಿಸಲು ಕೋರಿರತ್ತಾರೆ. ಇದಕ್ಕೆ ಬೇಕಾದ ಅನುದಾನಕ್ಕೆ ಶ್ರೀ ವೆಂಕಟೇಶ್ ರವರು ಅಂದಾಜು ಪಟ್ಟಿಯನ್ನು ಕೊಡಲು ನೋಡಲ್ ಅಧಿಕಾರಿಯವರು ಸೂಚಿಸಿದರು.

- ಸಂಚಾರಿ ಪೋಲೀಸ್ ಇಲಾಖೆಯಿಂದ ಶ್ರೀ ಧನಂಜಯ್ಯ ಮತ್ತು ಜಯಲಕ್ಷ್ಮೀ ರವರು ಸಭೆಯಲ್ಲಿ ಹಾಜರಿದ್ದು, ರಸ್ತೆ ಬದಿಗಳಲ್ಲಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸಬೇಕೆಂದು ಶ್ರೀ ಕೃಷ್ಣ ಮತ್ತು ಶ್ರೀಮತಿ ಶೈಲಜಾ ರವರು ಕೋರಿರುತ್ತಾರೆ. ಇದಕ್ಕೆ ಶ್ರೀ ಧನಂಜಯ್ಯ ಮತ್ತು ನರಸಿಂಹಯ್ಯ, ಸಹಾಯಕ ಅಭಿಯಂತರರು ರಸ್ತೆ ಬದಿಗಳಲ್ಲಿ ನಿಲ್ಲಿಸಿರುವ ವಾಹನಗಳ ಬಗ್ಗೆ ಕ್ರಮವಹಿಸಿರುವುದಾಗಿ ಸಭೆಗೆ ತಿಳಿಸಿದರು.

Scanned with CamScanner

- ಕಾನೂನು ಮತ್ತು ಸುವ್ಯವಸ್ಥೆ ಇಲಾಖೆಯಿಂದ ಶ್ರೀ ಭೋಗೇಶ್ ರವರು ಹಾಜರಿದ್ದು, ಸುವ್ಯವಸ್ಥೆ ಬಗ್ಗೆ ಸಭೆಗೆ ತಿಳಿಸಿದರು.

- ಬೆಸ್ಕಾಂ ಇಲಾಖೆಯಿಂದ ಶ್ರೀ ಮಂಜುನಾಥ್, ಸಹಾಯಕ ಅಭಿಯಂತರರು ಈಸ್ಟ್‌ಪಾರ್ಕ್ ರಸ್ತೆಯಲ್ಲಿ ಬಿದ್ದಿರುವ ಕಂಬಗಳನ್ನು ತೆರವುಗೊಳಿಸಬೇಕೆಂದು ಶ್ರೀ ಎಂ.ಕೆ ಕೃಷ್ಣ ರವರು ಕೋರಿರುತ್ತಾರೆ ಇದಕ್ಕೆ ಶ್ರೀ ಮಂಜುನಾಥ್ ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.

- ಶ್ರೀಮತಿ ರೇಖಾಚಾರಿ ಮತ್ತು ಶ್ರೀಮತಿ ಶೈಲಜಾ ರವರು ಕನ್ಸರ್ವೆನ್ಸಿಗಳ ಬಗ್ಗೆ ಮಾಹಿತಿ ಕೊಡಲು ಹಾಗೂ ಹೊಯ್ಸಳ ವಾಹನಗಳನ್ನು ಹೆಚ್ಚಿಸಬೇಕೆಂದು ಸಭೆಗೆ ಕೇಳಿರುತ್ತಾರೆ. ವಾರ್ಡ್–65ರನ್ನು ಪ್ಲಾಸ್ಟಿಕ್ ಮುಕ್ತ ವಾರ್ಡ್ ಮಾಡಬೇಕೆಂದು ಕೇಳಿರುತ್ತಾರೆ ಹಾಗೂ ಸಾಕು ನಾಯಿಗಳು ಮಾಡುವ ಗಲೀಜನ್ನು ಮಾಡಿಸದಂತೆ ಸೂಚಿಸಬೇಕೆಂದು ಸಭೆಗೆ ಕೋರಿರುತ್ತಾರೆ.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

21/5/2022

**ಕಾರ್ಯದರ್ಶಿ,**
**ಸಹಾಯಕ ಅಭಿಯಂತರರು, ವಾರ್ಡ್–65**
**ಕಾಡುಮಲ್ಲೇಶ್ವರ, ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ**

Scanned with CamScanner